

ನಾಯಿಯಿದೆ. ಕುರಿಯೊಂದು ಹೊಟ್ಟನ್ನು ತಿನ್ನುತ್ತಿದೆ. ಏಣಿಯ ಮೇಲೆ ಹತ್ತುತ್ತಿರುವ ಅಣ್ಣನ ಜೊತೆ ಮಾತನಾಡುತ್ತಿರುವ ತಂಗಿಯೊಬ್ಬಳಿದ್ದಾಳೆ. ಮನೆಯ ಮುಂದಿನ ಕಲ್ಲುಗಳ ಮೇಲೆ ಕೂತು ಕಾರ ಅರೆಯುತ್ತಿರುವ ಹೆಂಗಸೊಬ್ಬಳಿದ್ದಾಳೆ.(ಹೀಗೆ ಹೆಂಗಸೊಬ್ಬಳು ಚರಂಡಿಯನ್ನು ಮುಚ್ಚಿರುವ ಚಪ್ಪಡಿಗಲ್ಲಿನ ಮೇಲೆ ಕಾರ ಅರೆಯುತ್ತಿರುವ ಚಿತ್ರವನ್ನು ಮೊನ್ನೆ ತಾನೆ ಹೊನ್ನಾಳಿ ತಾಲ್ಲೂಕಿನ ಹೆಚ್.ಗೋಪನಗೊಂಡನಹಳ್ಳಿಯ ಲಂಬಾಣಿ ತಾಂಡದಲ್ಲಿ ನೋಡಿದೆ.) ಶಾಲೆಗೆ ಹೊರಟುನಿಂತ ಮಕ್ಕಳಿವೆ, ಅಲ್ಲಲ್ಲಿ ಮನೆಗಳ ಮುಂದೆ ಸೈಕಲ್‌ಗಳು ನಿಂತಿವೆ. ಪ್ರಾಯಶಃ ದಲಿತ ಕೇರಿಗಳಲ್ಲಿ ತೆಂಗಿನ ಮರ ಬೆಳೆಸುವ ಇರಾದೆ ಹೊಟ್ಟೆಗೆ ಹಿಟ್ಟು ಇಲ್ಲದೆ ಜುಟ್ಟಿಗೆ ಮಲ್ಲಿಗೆ ಹೂವನ್ನು ಅರಸುವ ತರದ್ದು. ಈ ಮಾತಿಗೆ ಅಪವಾದಗಳಿರಬಹುದು. ಆ ಮರ ಬೆಳೆಯುವ ಜಾಗದಷ್ಟರಲ್ಲಿಯೆ ಆಶ್ರಯಕ್ಕಾಗಿ ತವಕಿಸುವ ಜೀವಗಳುಂಟು. ಗಾರಸಿದ್ಮಾವ ಹದಿನಾರು ಎಳನೀರು ಕುಡಿಯಬೇಕಾಗಿರುವುದರಿಂದ ಚಿತ್ರದಲ್ಲಿ ತೆಂಗಿನಮರಗಳಿರಬಹುದು.

ಕೆಲವೆ ದಿನಗಳಲ್ಲಿ ಅತೀ ಹೆಚ್ಚು ಮುದ್ರಣಗೊಂಡ 'ಎದೆಗೆ ಬಿದ್ದ ಅಕ್ಷರ' ದ ಮುಖಪುಟ ಇತರೆ ಕೃತಿಗಳಿಗಿಂತ ವಿಭಿನ್ನವಾಗಿದೆ. ಪುಸ್ತಕದ ಮೇಲೆ ಕನ್ನಡದ ಹೆಸರಾಂತ ಲೇಖಕರ ಜೊತೆಗೆ ಓದುಗರ ಹಸ್ತಾಕ್ಷರಗಳಿರುವುದನ್ನು ಗಮನಿಸಬೇಕು. ಇವು ದೇವನೂರರ ಸೂಚನೆಯ ಮೇರೆಗೆ 'ಅಭಿನವ'ದವರು ಮಳಿಗೆಗೆ ಬಂದ ಓದುಗರಿಂದ ಹಾಕಿಸಿದ ಹಸ್ತಾಕ್ಷರಗಳಂತೆ. 'ಕೃತಿ ತನ್ನದಲ್ಲ, ಬದಲಿಗೆ ಎಲ್ಲರದ್ದು' ಎನ್ನುವ ಒಳಗೊಳ್ಳುವಿಕೆಯ ಆಶಯ ಇದರ ಹಿಂದೆ ಅಡಗಿದೆ. ಆದರೆ, ಅದು ತನ್ನಷ್ಟಕ್ಕೆ ತಾನೆ ಬೇರೆ ಬೇರೆ ಅರ್ಥಸಾಧ್ಯತೆಗಳನ್ನೂ ಪಲ್ಲವಿಸುತ್ತಿದೆ. ನಮ್ಮೆಲ್ಲ ಸಾಮಾಜಿಕ ಸಂಕಟಗಳಿಂದ ಬಿಡುಗಡೆಗೊಳ್ಳಬೇಕಾದರೆ ಅಕ್ಷರಗಳನ್ನು ದಕ್ಕಿಸಿಕೊಳ್ಳುವುದೊಂದೆ ನಮಗಿರುವ ಋಜುಮಾರ್ಗ ಎನ್ನುವುದು ಅಂತಹ ಸಾಧ್ಯತೆಗಳಲ್ಲೊಂದು. ಪುಸ್ತಕದಲ್ಲಿ ಬರುವ ಸಾಕ್ಷರತೆಗಾಗಿ ರಚಿಸಿದ 'ಭೂಮಿಗೆ ಬಿದ್ದ ಬೀಜ ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಡುವುದು' ಎಂಬ ಮಾತು ನುಡಿಮುತ್ತಿನ ರೂಪ ಪಡೆದು ಚಾಲ್ತಿಯಲ್ಲಿದೆ.

ಸಾಕ್ಷರತೆ ವೃದ್ಧಿಸಲು 'ಅಕ್ಷರಧಾರ' ಕಾರ್ಯಕ್ರಮದಲ್ಲಿ ಶಾಲೆಯ ಮೆಟ್ಟಿಲು ಹತ್ತದ ವಯಸ್ಕರಿಗೆ ತಮ್ಮ ದಸ್ಕತ್ತನ್ನಾದರೂ ಒತ್ತುವುದನ್ನು ಕಲಿಯುವಂತೆ ತರಬೇತಿ ಕೊಡುತ್ತಿದ್ದುದನ್ನು ನೋಡಿದ್ದೆವು. ಅಂಬೇಡ್ಕರ್ ಕೂಡ ಅಸ್ಪೃಶ್ಯತೆಯ ನಿವಾರಣೆಗೆ ವಿದ್ಯಾವಂತರಾಗುವುದೇ ದಿವ್ಯ ಮಾರ್ಗ ಎಂದಿದ್ದರು. ಆದರೆ, ಇದೇ ಪುಸ್ತಕದಲ್ಲಿ ದೇವನೂರರು ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ನಡೆಯುತ್ತಿರುವ ಕ್ರೌರ್ಯಗಳಿಗೆ ರೋಸಿ, ಯಾಕಾದರೂ ನಾನು ವಿದ್ಯಾವಂತನಾದೆನೊ ಎಂದು ಪರಿತಪಿಸುವುದೂ ಬರುತ್ತದೆ... 'ಒಡಲಾಳ'ದ ಪುಟ್ಟಗೌರಿ ನವುಲಿನ ಚಿತ್ರ ಬಿಡಿಸುವ ಪ್ರಸಂಗ ದಲಿತ ಲೋಕದ ಪಾತಳಿಗಳನ್ನು ಭಿನ್ನ ಮಜಲುಗಳಲ್ಲಿ ಚರ್ಚೆ ಮಾಡಲು ಆಸ್ಪದ ಮಾಡಿಕೊಟ್ಟದ್ದು ನಮಗೆಲ್ಲ ತಿಳಿದೆ ಇದೆ.

ಪುರಾಣ, ಜಾನಪದ, ಚರಿತ್ರೆಗಳಿಂದ ವಸ್ತುಗಳನ್ನೆತ್ತಿಕೊಂಡು ನಾಟಕಗಳನ್ನು ಬರೆದ ಗಿರೀಶ್ ಕಾರ್ನಾಡರ ಕೃತಿಗಳ ಮೇಲೆ ವಸ್ತುಸಹಜ ಗುಣಗಳನ್ನು ಪ್ರತಿಬಿಂಬಿಸುವ ಸಾಮಾನ್ಯ ಚಿತ್ರಗಳಿವೆಯಷ್ಟೆ. ಸಿದ್ಧಲಿಂಗಯ್ಯನವರ 'ಊರುಕೇರಿ'ಯ ಮೊದಲ ಸಂಪುಟದಲ್ಲಿ ಸಿದ್ಧಲಿಂಗಯ್ಯನವರ ಮೊಗದಲ್ಲಿ ಉರಿಯುತ್ತಿರುವ ಕಂಗಳ ಹಿನ್ನೆಲೆಗೆ ಅಮೂರ್ತವಾದ ಕೆಂಬಣ್ಣದ ಚಿತ್ರವೊಂದಿದೆ. ಗುಡಿಸಲಿನಿಂದ ಆಸ್ಫೋಟಿಸಿದ ಪ್ರತಿಭೆಯೊಂದನ್ನು ಅದು ಸಶಕ್ತವಾಗಿ ಪ್ರತಿನಿಧಿಸುತ್ತಿದೆ. ಲಂಕೇಶರ 'ಹುಳಿಮಾವಿನಮರದಲ್ಲಿ' ಯಾವುದೆ ಮರದ ಚಿತ್ರವಿಲ್ಲ. ಬದಲಿಗೆ ಅನೇಕ ಜನರಿಗೆ ತಮ್ಮ ಪತ್ರಿಕೆಯ ಮುಖೇನ ನೆರಳನ್ನಿತ್ತು ಆ ಮೂಲಕ ಅವರನ್ನು ಲೇಖಕರನ್ನಾಗಿ ರೂಪಿಸಿದ ಲಂಕೇಶರು ತುಸುನಗೆಯನ್ನು ಸೂಸುತ್ತಿರುವ ಚಿತ್ರವಷ್ಟೆ ಇದೆ.

ಡಿ.ಎಸ್. ನಾಗಭೂಷಣ ಅವರ 'ಗಾಂಧಿ ಕಥನ' ಬಹಳಷ್ಟು ಓದುಗರನ್ನು ತಲುಪಿದ ಕೃತಿ. ಅದರಲ್ಲಿ ಮಹಾತ್ಮರು ವಿಷಣ್ಣವದನರಾಗಿ ಕುಳಿತಿರುವ ಚಿತ್ರವೊಂದಿದೆ. 'ಗಾಂಧೀಜಿಯವರು ಯರವಾಡ ಸೆರೆಮನೆಯಲ್ಲಿದ್ದಾಗ ಕಸ್ತೂರಬಾ ನಿಧನರಾದ ಸಂದರ್ಭದಲ್ಲಿ ಗಾಂಧಿ ವಿಷಣ್ಣರಾಗಿ ಕೂತಿದ್ದಾಗ ತೆಗೆದ ಭಾವಚಿತ್ರ' ಎಂದು ಎರಡನೆ ಮುದ್ರಣದ ಲೇಖಕರ ಮಾತಿನಲ್ಲಿ ಓದುಗರ ಅಪೇಕ್ಷೆಯ ಮೇರೆಗೆ